# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 349 |
| 2 | ಸದಸ್ಯರ ಹೆಸರು | ಶ್ರೀ ಎಂ. ಎಲ್. ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 21.12.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಸಂಖ್ಯೆ ಎಷ್ಟು; ಈ ಕೇಂದ್ರಗಳು ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿವೆ; | ರಾಜ್ಯದ ಎಲ್ಲಾ ಹೋಬಳಿ ಮಟ್ಟದಲ್ಲಿ ಒಟ್ಟು 770 ನಾಡಕಛೇರಿಗಳು, 122 ಫ್ರಂಟ್ ಆಫೀಸ್‌ಗಳು ಹಾಗೂ ಜಿಲ್ಲಾ ಮಟ್ಟದಲ್ಲಿ 31 ಸ್ಪಂದನ ಕೇಂದ್ರಗಳಿವೆ.<br><br>ಸರ್ಕಾರದ ಆದೇಶ ಸಂಖ್ಯೆ: ಕಂಇ 33 ಡಿ ಎಸ್ ಪಿ 2012, ದಿನಾಂಕ: 18-12-2012 ರಲ್ಲಿ ನೆಮ್ಮದಿ ಕೇಂದ್ರದ ಹೆಸರನ್ನು ಅಟಲ್ ಜೀ ಜನಸ್ನೇಹಿ ಕೇಂದ್ರವೆಂದು ಪದನಾಮೀಕರಿಸಿದ್ದು, ದಿನಾಂಕ: 25-12-2012 ರಿಂದ ಸದರಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. |
| ಆ) | ಸದರಿ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್‌ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) | ಸದರಿ ಕೇಂದ್ರಗಳಲ್ಲಿ ಒಟ್ಟು 1410 ಡಾಟಾ ಎಂಟ್ರಿ ಆಪರೇಟರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. |
| ಇ) | ಸದರಿಯವರು ಯಾವುದೇ ಸೇವೆ ಭದ್ರತೆ ಇಲ್ಲದೇ ಹಲವಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿಯವರ ಸೇವಾಭದ್ರತೆ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ: (ಪೂರ್ಣ ಮಾಹಿತಿ ನೀಡುವುದು) | ಅಟಲ್ ಜೀ ಜನಸ್ನೇಹಿ ಕೇಂದ್ರದ ಡೇಟಾ ಎಂಟ್ರಿ ಆಪರೇಟರ್‌ಗಳು ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸೇವಾ ಭದ್ರತೆ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| ಈ) | ಗ್ರಾಮ-1 ಕೇಂದ್ರಗಳನ್ನು ತೆರೆದಿರುವುದರ ಉದ್ದೇಶವೇನು: ಸದರಿ ಕೇಂದ್ರದಿಂದ ಜನರಿಗೆ ಉಪಯೋಗವಾಗುತ್ತಿದೆಯೇ? (ಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಗ್ರಾಮೀಣ ಭಾಗದ ನಾಗರೀಕರು ತಾಲ್ಲೂಕು ಮಟ್ಟದ ಕಛೇರಿಗಳಿಗೆ ಭೇಟಿ ನೀಡದೆ ತಮ್ಮ ಗ್ರಾಮದಲ್ಲಿಯೇ ಎಲ್ಲಾ ಇಲಾಖೆಗಳ ವಿವಿಧ ಸೇವೆಗಳನ್ನು ಒಂದೇ ಸೂರಿನಡಿ ನೀಡುವ ಉದ್ದೇಶದಿಂದ ಗ್ರಾಮ ಒನ್ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಇದರಿಂದ ನಾಗರಿಕರ ಸಮಯದ ಉಳಿತಾಯದೊಂದಿಗೆ ತಮ್ಮ ದಿನಗೂಲಿ ಕಳೆದುಕೊಳ್ಳುವ ಅವಶ್ಯಕತೆಯಿರುವುದಿಲ್ಲ.<br><br>**<u>ಉಪಯೋಗಗಳು</u>**<br>• ಮನೆಗಳ ಬಳಿಯೇ ನಾಗರಿಕರ ಸೇವೆಗಳ ಲಭ್ಯ.<br>• ಎಲ್ಲಾ ವರ್ಧಿತ ವೈಶಿಷ್ಟ್ಯಗಳೊಂದಿಗೆ ಸೇವಾ ಸಿಂಧು ವೇದಿಕೆಯ ಮೂಲಕ ಸರ್ಕಾರಿ ಇಲಾಖೆಗಳಿಂದ 800ಕ್ಕೂ ಹೆಚ್ಚು ಜಿ 2 ಸಿ ಸೇವೆಗಳು ಲಭ್ಯವಿದೆ.<br>• ಗ್ರಾಮೀಣ ಜನತೆಗೆ ಪ್ರಯಾಣ ಮತ್ತು ಇತರೆ ವೆಚ್ಚದಲ್ಲಿ ಉಳಿತಾಯ.<br>• ಮಧ್ಯವರ್ತಿಗಳ ಹಾವಳಿ ಇರುವುದಿಲ್ಲ. |

- ಅಧಿಸೂಚಿತ ಸಮಯದಲ್ಲಿ ಸೇವೆ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಸಕಾಲ ತಂತ್ರಾಂಶದೊಂದಿಗೆ ಏಕೀಕರಣ.
- ಇದು ಗ್ರಾಮೀಣ ಯುವಕರಿಗೆ ಗ್ರಾಮ ಮಟ್ಟದಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸುವುದಲ್ಲದೆ, ಆಡಳಿತ ವ್ಯವಸ್ಥೆಗೆ ವಿಕೇಂದ್ರೀಕೃತ ಸ್ವ-ಆಡಳಿತದ ಬೆನ್ನೆಲುಬನ್ನು ಸೃಷ್ಟಿಸುತ್ತದೆ.

**ಸಾಧನೆಗಳು**

- ಪ್ರಸ್ತುತ ರಾಜ್ಯಾದ್ಯಂತ 7363 ಗ್ರಾಮ ಒನ್ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಗ್ರಾಮ ಒನ್ ಕೇಂದ್ರಗಳ ಮೂಲಕ 80 ಕ್ಕೂ ಹೆಚ್ಚು ಇಲಾಖೆಗಳ ಒಟ್ಟು 850 ಸೇವೆಗಳು ನಾಗರಿಕರಿಗೆ ಒದಗಿಸಲಾಗುತ್ತಿದೆ.
- ಈ ತಹಲ್‌ವರೆಗೆ ಗ್ರಾಮ ಒನ್ ಕೇಂದ್ರಗಳ ಮೂಲಕ 1.41 ಕೋಟಿಗೂ ಹೆಚ್ಚು ಅರ್ಜಿಗಳು ಸ್ವೀಕೃತವಾಗಿದ್ದು, ಸದರಿ ಸ್ವೀಕೃತಿಗಳಲ್ಲಿ ಒಟ್ಟು 1.39 ಕೋಟಿಯಷ್ಟು ಅರ್ಜಿಗಳು ವಿಲೇವಾರಿಯಾಗಿರುತ್ತದೆ.

| **ಒಟ್ಟು ಸ್ವೀಕೃತಿ** | **ಒಟ್ಟು ವಿಲೇವಾರಿ** | **ಒಟ್ಟು ತಿರಸ್ಕೃತ** |
|---|---|---|
| 1,41,44,860 | 1,39,54,415 | 1,57,445 |

**ಸಂಖ್ಯೆ: ಕಂಇ 86 ಎಜೆಎಸ್ 2022**

**(ಆರ್. ಅಶೋಕ)**
ಕಂದಾಯ ಸಚಿವರು